ರಾಜ್ಯದಲ್ಲಿ ಸ್ತ್ರೀ ಶಕ್ತಿ ಸಂಘಗಳಿಗೆ ಬ್ಯಾಂಕುಗಳು ನೀಡುವ ಸಾಲದ ಬಗ್ಗೆ

4212 (4950) : ಶ್ರೀ ಚಂದ್ರಪ್ಪ ಎಂ (ಭರಮಸಾಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮಹಿಳಾ ಸಂಘಗಳು ಮತ್ತು ಸ್ತ್ರೀಶಕ್ತಿ ಸಂಘಗಳು ಎಷ್ಟು

ಆ) ಈ ಸಂಘಗಳ ಮುಖಾಂತರ ಉಳಿತಾಯ ಮಾಡಿರುವ ಹಣವೆಷ್ಟು ಈ ಹಣಕ್ಕೆ ಬ್ಯಾಂಕುಗಳವರು ಕೊಡುವ ಬಡ್ಡಿ ಎಷ್ಟು;

ಇ) ಈ ಹಣ ಆಧಾರವಾಗಿಟ್ಟುಕೊಂಡಿರುವ ಬ್ಯಾಂಕುಗಳು ಸ್ತ್ರೀಶಕ್ತಿ ಸಂಘಗಳಿಗೆ ರಾಜ್ಯದ ನೀಡಿರುವ ಸಾಲ ಎಷ್ಟು ರಾಜ್ಯದ ಯಾವ ಯಾವ ಬ್ಯಾಂಕುಗಳ ಮುಖಾಂತರ ಸಾಲ ನೀಡಲಾಗಿದೆ;

ಈ) ಸ್ತ್ರೀಶಕ್ತಿ ಹಾಗೂ ಮಹಿಳಾ ಸಂಘದ ಸದಸ್ಯರು ಸಭೆ, ಸಮಾರಂಭ ನಡೆಸುವುದಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳಾವಕಾಶ ಇಲ್ಲದೆ ತೊಂದರೆ ಅನುಭವಿಸುತ್ತಿರುವುದರಿಂದ ಪಂಚಾಯ್ತಿ ಅಥವಾ ಆಶ್ರಯ ಸಮಿತಿಯ ಮುಖಾಂತರ ನಿವೇಶನಗಳನ್ನು ಪಡೆದು, ಸರಕಾರದ ವತಿಯಿಂದ ಕಟ್ಟಡ ಕಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ.

ಉ) ಈ ರೀತಿ ಮಾಡುವುದರಿಂದ ಮಹಿಳೆಯರ ನೆರವಿಗೆ ಸರಕಾರ ಬಂದಂತಾಗುವುದಿಲ್ಲವೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 16223 ಮಹಿಳಾ ಸಂಘಗಳು ಮತ್ತು 7598 ಸ್ತ್ರೀಶಕ್ತಿ ಗುಂಪುಗಳಿರುತ್ತವೆ.

ಆ) ಸ್ತ್ರೀ ಸಂಘಗಳ ಮುಖಾಂತರ ಉಳಿತಾಯ ಮಾಡಿರುವ ಮೊತ್ತ ಒಟ್ಟು ರೂ. 140.65 ಕೋಟಿಗಳು ಈ ಹಣಕ್ಕೆ ಬ್ಯಾಂಕಿನವರು ನಿಯಮಾನುಸರ ಬಡ್ಡಿಯನ್ನು ನೀಡುತ್ತಿದ್ದಾರೆ.

ಇ) ಬ್ಯಾಂಕುಗಳು ಇದುವರೆವಿಗೆ ನೀಡಿರುವ ಸಾಲ ಸುಮಾರು ರೂ. 50.00 ಕೋಟಿಗಳಾಗಿದೆ. ರಾಜ್ಯದ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು ಪ್ರಾದೇಶಿಕ ಗ್ರಾಮೀಣ ಕೋ-ಆಪರೇಟಿವ್ ಬ್ಯಾಂಕ್, ವಾಣಿಜ್ಯ ಬ್ಯಾಂಕುಗಳು ಹಗೂ ಇತರ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ನೀಡಲಾಗಿದೆ.

ಈ) ಸದ್ಯಕ್ಕೆ ಈ ಕುರಿತು ಯಾವುದೇ ಪ್ರಸ್ತಾವನೆ ಸರಕಾರದ ಮುಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯಾ ಮಾಹಿತಿ ಬಗ್ಗೆ

4213 (4894) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ್ಯಾಂತ ರಚಿಸಿಕೊಂಡಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಶಿವಮೊಗ್ಗ ಜಿಲ್ಲೆಯಲ್ಲಿ ರಚಿತಗೊಂಡಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ ಎಷ್ಟು? ತಾಲ್ಲೂಕುವಾರು ವಿವರ ನೀಡುವುದು.

ಇ) ಈ ಸ್ತ್ರೀಶಕ್ತಿಯ ಧ್ಯೇಯೋದ್ದೇಶಗಳೇನು; ಹಾಗೂ ಇದರಿಂದ ಸಮಾಜಕ್ಕೆ ಆಗುವ ಪ್ರಯೋಜನಗಳೇನು;

ಈ) ಈ ಯೋಜನೆಗೆ ಜಿಲ್ಲಾ ಮಟ್ಟದಲ್ಲಾಗಲೀ ತಾಲ್ಲೂಕು ಮಟ್ಟದಲ್ಲಾಗಲೀ ಅಥವಾ ರಾಜ್ಯ ಮಟ್ಟದಲ್ಲಾಗಲೀ ಸಮಿತಿಗಳನ್ನೇನಾದರೂ ರಚಿಸಲಾಗಿದೆಯೇ

ಉ) ಈ ಸಮಿತಿಗಳಿಗೆ ಅಧ್ಯಕ್ಷರುಗಳು ಸದಸ್ಯರುಗಳು ಯಾರನ್ನಾದರೂ ಸರಕಾರ ನೇಮಿಸಿದೆಯೇ; ಈ ಸಮಿತಿಗಳಿಗೆ ಸಂಸದರು ಶಾಸಕರುಗಳು ಸದಸ್ಯರುಗಳೇ

ಊ) ಸರ್ಕಾರವು ಈ ಸ್ತ್ರೀ ಶಕ್ತಿ ಗುಂಪುಗಳಿಗೆ ಸಹಾಯಧನವನ್ನೇನಾದರೂ ಒದಗಿಸಿದೆಯೇ, ಒದಗಿಸಿದ್ದರೆ, ಜಿಲ್ಲಾವಾರು ವಿವರಗಳನ್ನು ನೀಡುವುದು:

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯಾದ್ಯಾಂತ ರಚಿಸಿಕೊಂಡಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ 75958
ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ರಚಿತವಾಗಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ : 2376
ತಾಲ್ಲೂಕುವಾರು ವಿವರ

| | | |
|---|---|---|
| 1. | ಶಿವಮೊಗ್ಗ | : 332 |
| 2. | ಭದ್ರಾವತಿ | : 414 |
| 3. | ಸಾಗರ | : 349 |
| 4. | ಸೊರಬ | : 414 |
| 5. | ಶಿಕಾರಿಪುರ | : 390 |
| 6. | ಹೊಸನಗರ | : 192 |
| 7. | ತೀರ್ಥಹಳ್ಳಿ | : 285 |
| | ಒಟ್ಟು | :2376 |

ಇ) ಸ್ತ್ರೀಶಕ್ತಿ ಯೋಜನೆಯ ಧ್ಯೇಯೋದ್ದೇಶಗಳು ಈ ಕೆಳಕಂಡಂತಿವೆ.

1. ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು.
2. ರಾಜ್ಯಾದ್ಯಂತ ಒಂದು ಲಕ್ಷ ಸ್ವಸಹಾಯ ಮಹಿಳಾ ಗುಂಪುಗಳನ್ನು ರಚಿಸುವುದು ಹಾಗೂ ಅವರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು
3. ಸರಕಾರದ ವಿವಿಧ ಇಲಾಖೆಗಳ ಸೇವೆಗಳನ್ನು (ಅಭಿವೃದ್ಧಿ ಕಾರ್ಯಕ್ರಮಗಳು ದೊರಕಿಸಿಕೊಡಲು ಕ್ರಮಕ್ಕೆಗೊಳ್ಳುವುದು

ಯೋಜನೆಯಿಂದ ಸಮಾಜಕ್ಕಾಗುವ ಪ್ರಯೋಜನಗಳು :
ಮಹಿಳೆಯರಲ್ಲಿ ಸಾಮಾಜಿಕ ಪ್ರಜ್ಞೆ ಹಗೂ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು.

ಈ) ಈ ಯೋಜನೆಗೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ.

ಉ) ಹೌದು.

ಇಲ್ಲ.

ಊ) ಹೌದು, (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಸ್ತ್ರೀ ಶಕ್ತಿ ಯೋಜನೆಯಡಿ ಜೂನ್ 2003 ರ ಅಂತ್ಯಕ್ಕೆ ಪ್ರಗತಿ ವರದಿ

| ಕ್ರ.ಸಂ. | ಜಿಲ್ಲೆಯ ಹೆಸರು | ಗುಂಪುಗಳ ಸಾಧನೆ | ಸುತ್ತುನಿಧಿ ನೀಡಿರುವ ಗುಂಪುಗಳ ಸಂಖ್ಯೆ | ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| 1. | ಬೆಂಗಳೂರು (ನ) | 1732 | 1512 | 79.00 |
| 2. | ಬೆಂಗಳೂರು (ಗ್ರಾ) | 4116 | 2283 | 114.15 |
| 3. | ಬಾಗಲಕೋಟೆ | 2359 | 1710 | 85.90 |
| 4. | ಬೆಳಗಾಂ | 7152 | 4749 | 331.11 |
| 5. | ಬಳ್ಳಾರಿ | 2753 | 2012 | 100.60 |
| 6. | ಬೀದರ್ | 1909 | 1599 | 79.85 |
| 7. | ಬಿಜಾಪುರ | 2611 | 2001 | 107.30 |
| 8. | ಚಾಮರಾಜನಗರ | 2329 | 1435 | 71.75 |
| 9. | ಚಿಕ್ಕಮಗಳೂರು | 1558 | 1494 | 81.85 |
| 10. | ಚಿತ್ರದುರ್ಗ | 2144 | 2075 | 114.25 |
| 11. | ದಾವಣಗೆರೆ | 2963 | 2199 | 109.96 |
| 12. | ದಕ್ಷಿಣ ಕನ್ನಡ | 3026 | 2352 | 118.09 |
| 13. | ಧಾರವಾಡ | 1841 | 1720 | 89.15 |
| 14. | ಗದಗ | 1424 | 1415 | 70.75 |
| 15. | ಗುಲ್ಬರ್ಗಾ | 4474 | 3508 | 175.40 |
| 16. | ಹಾಸನ | 3302 | 2119 | 108.70 |
| 17. | ಹಾವೇರಿ | 3197 | 2261 | 113.90 |
| 18. | ಕೊಡಗು | 592 | 953 | 48.05 |
| 19. | ಕೋಲಾರ | 4280 | 3470 | 173.50 |
| 20. | ಕೊಪ್ಪಳ | 1473 | 1473 | 73.65 |
| 21. | ಮಂಡ್ಯ | 3529 | 2261 | 130.40 |
| 22. | ಮೈಸೂರು | 3701 | 2183 | 112.50 |
| 23. | ರಾಯಚೂರು | 2492 | 1701 | 85.35 |
| 24. | ಶಿವಮೊಗ್ಗ | 2292 | 1948 | 97.40 |
| 25. | ತುಮಕೂರು | 5481 | 2671 | 140.35 |
| 26. | ಉಡುಪಿ | 1880 | 1875 | 95.65 |

| 1 | 2 | 3 | 4 | 5 |
|---|---|---|---|---|
| 27. | ಉತ್ತರ ಕನ್ನಡ | 1248 | 1858 | 114.40 |
| | ಒಟ್ಟು | 75958 | 56841 | 3929.06 |

ರಾಜ್ಯದಲ್ಲಿ ಮೆಕ್ಕೆ ಜೋಳ ಖರೀದಿ ಬಗ್ಗೆ

4214 (4895) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2001-02, 2002-03ನೇ ಸಾಲಿನಲ್ಲಿ ಮೆಕ್ಕೆ ಜೋಳ ಖರೀದಿಸಲು ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು;

ಆ) ರಾಜ್ಯದಲ್ಲಿ ಎಷ್ಟು ಕ್ವಿಂಟಾಲ್ ಮೆಕ್ಕೆ ಜೋಳ ಖರೀದಿಸಲಾಗಿದೆ? (ವಿವರ ನೀಡುವುದು)

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 2001-2002ನೇ ಸಾಲಿನಲ್ಲಿ ಮೆಕ್ಕೆಜೋಳ ಸಂಗ್ರಹಿಸಲು ರೂ. 8.89 ಕೋಟಿಗಳನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಆವರ್ತ ನಿಧಿಯಿಂದ ಪಡೆಯಲಾಗಿತ್ತು. 2002-03ನೇ ಸಾಲಿನಲ್ಲಿ ರೂ. 49.99 ಲಕ್ಷಗಳನ್ನು ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದಿಂದ ನಗದುಸಾಲ ಪಡೆದು ಮೆಕ್ಕೆಜೋಳವನ್ನು ಖರೀದಿಸಲಾಗಿತ್ತು.

ಆ) ರಾಜ್ಯದಲ್ಲಿ 2002-02 ಹಾಗೂ 2002-03ನೇ ಸಲಿನಲ್ಲಿ ಸಂಗ್ರಹಿಸಲಾದ ಮೆಕ್ಕೆಜೋಳದ ವಿವರ ಈ ಕೆಳಕಂಡಂತಿದೆ:-

2001-02ನೇ ಸಾಲಿನಲ್ಲಿ - 177829.74 ಕ್ವಿಂ

2002-03ನೇ ಸಾಲಿನಲ್ಲಿ - 9899.99 ಕ್ವಿಂ

ರಾಜ್ಯದಲ್ಲಿ ಬಿತ್ತನೆ ಬೀಜದ ಸಬ್ಸಿಡಿ ಬಗ್ಗೆ

4215 (4896) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ಯಾವ ಯಾವ ಬಿತ್ತನೆ ಬೀಜವನ್ನು ಸಬ್ಸಿಡಿ ನೀಡಲು ಆದೇಶಿಸಿದೆ;

ಆ) ಸಬ್ಸಿಡಿ ದರವೆಷ್ಟು;

ಇ) ಈ ಬಿತ್ತನೆ ಬೀಜವನ್ನು ಎಲ್ಲಾ ರೈತರುಗಳು ಸಬ್ಸಿಡಿ ದರದಲ್ಲಿ ಖರೀದಿಸಲು ಅರ್ಹರೇ;

ಈ) ದಿನಾಂಕ:30-6-2003 ರವರೆಗೂ ಎಷ್ಟೆಷ್ಟು ಬಿತ್ತನೆ ಬೀಜವನ್ನು ಸಬ್ಸಿಡಿ ದರದಲ್ಲಿ ನೀಡಲಾಗಿದೆ;

ಉ) ಬಗರ್ ಹುಕಂನಲ್ಲಿ ಜಮೀನು ಸಾಗುವಳಿ ಮಾಡುವವರಿಗೆ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜವನ್ನು ನೀಡಲಾಗುವುದೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಸರ್ಕಾರವು ಭತ್ತ, ರಾಗಿ,ಜೋಳ ಮುಸುಕಿನ ಜೋಳ ಸಜ್ಜಿ, ಗೋಗರಿ, ಉದ್ದು, ಹೆಸರು ಅಲಸಂದೆ, ಶೇಂಗಾ ಸೂರ್ಯಕಾಂತಿ, ಸೋಯ ಅವರೆ ಮತ್ತು ಹತ್ತಿ ಬೆಳೆಗಳ ಬಿತ್ತನೆ ಬೀಜವನ್ನು ಮುಂಗಾರು ಹಂಗಾಮಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿ ಶೇಕಡಾ 50ರ ರಿಯಾಯಿತಿ ದರದಲ್ಲಿ ನೀಡಲು ಆದೇಶಿಸಿದೆ.